ಆಲೆಮನೆಗಳು. ಅವುಗಳ ಒಳಹೊಕ್ಕರೆ, ಕರೆಯದೆ ಬಂದ ನಂಟರನ್ನು ನಿರ್ಲಕ್ಷಿಸುವಂತೆ ಹಾದಿ ಹೋಕರನ್ನು ಕ್ಯಾರೆ ಅನ್ನದೆ, ಆಲೆಮನೆಯವರು ಪಾಕದ ಹದ ನೋಡುವ, ಅದನ್ನು ಅಚ್ಚುಗಳಲ್ಲಿ ಸುರಿಯುವ, ಮೂಟೆಗೆ ಬೆಲ್ಲ ತುಂಬುವುದರಲ್ಲಿ ತನ್ಮಯರಾಗಿರುವರು. ಆದರೆ ಅವರದು ನಟನೆಯೆಂದೂ ನಮ್ರದನಿಯಿಂದ ಅಹವಾಲು ಸಲ್ಲಿಸುವುದನ್ನೇ ಕಾಯುತ್ತಿರುತ್ತಾರೆ ಎಂದೂ ನನಗೆ ಯಾವಾಗಲೂ ಅನಿಸಿದೆ. ಯಾಕೆಂದರೆ ಬಂದವರು ಕೇಳಿದಾಗೆಲ್ಲ ಅವರು ಕೆಲಸ ನಿಲ್ಲಿಸಿ, ಕಬ್ಬನ್ನೊ ಹಾಲನ್ನೊ ಜೋನಿಬೆಲ್ಲವನ್ನೊ ಧಾರಾಳವಾಗಿ ದಯಪಾಲಿಸಿದ್ದಾರೆ. ಈ ಸೀಮೆಯ ಔದಾರ್ಯವನ್ನು ಲೋಕಕ್ಕೆ ಸಾರಿ ಹೇಳುವಂತಿದ್ದ ಈ ಆಲೆಮನೆಗಳು ಯಾಕೊ ಈಚೆಗೆ ಕಡಿಮೆಯಾಗುತ್ತಿವೆ. ಜನರನ್ನು ಹಾಲು–ಬೆಲ್ಲದ ಪರಿಮಳದಿಂದ ವಂಚಿಸುತ್ತಿವೆ.

ಎರಡು: ಈ ಆಲೆಮನೆಗಳ ಸನಿಹದಲ್ಲೇ ಇರುವ ಗಾಳೆಮ್ಮನ ಗುಡಿಯ ಆವರಣವು, ಮಂಗಳ ಮತ್ತು ಶನಿಯ ವಾರಗಳಂದು ಬಾಡೂಟದ ಕಂಪನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುತ್ತದೆ. ಈ ಕಂಪುಸೃಷ್ಟಿ ಮೂರು ಘಟ್ಟಗಳಲ್ಲಿ ಜರುಗುತ್ತದೆ. ಭಕ್ತರು ಡೊಳ್ಳು ಬಾರಿಸುವ, ದೀಡ್‌ನಮಸ್ಕಾರ ಮಾಡುವ, ಹರಕೆ ಕುರಿಯನ್ನು ಮೆರೆಸುವ, ಶಾಮಿಯಾನ ಹಾಕುವ, ಚರ್ಮ ಸುಲಿದು ಮಾಂಸ ತುಂಡುಮಾಡುವ, ಒಲೆಹೂಡುವ, ಕಾರಕಡೆಯುವ ಸಿದ್ಧತಾ ಘಟ್ಟ; ನೂರಾರು ಒಲೆಗಳಿಂದ ಕೋಳಿ, ಕುರಿಗಳ ಮಾಂಸವು ಮಸಾಲೆಯಲ್ಲಿ ಬೇಯುತ್ತ ಘಮ್ಮನೆಯ ಕಂಪು ಹೊಮ್ಮಿಸುವ ಘಟ್ಟ; ಶಾಮಿಯಾನದ ಇಲ್ಲವೇ ಮರದ ನೆರಳಲ್ಲಿ ಲೋಕವನ್ನೇ ಮರೆತವರಂತೆ ಜನ ಪಂಕ್ತಿಯಲ್ಲಿ ಕುಳಿತು ಬಾಡೂಟ ಮಾಡುವ ಘಟ್ಟ; ಈ ಕೊನೇ ಘಟ್ಟದಲ್ಲಿ ಬಾಡುಸಾರಿನ ಕಂಪಿನೊಂದಿಗೆ ವಿವಿಧ ಬ್ರಾಂಡಿನ 'ಎಣ್ಣೆಗಂಪು' ಹದವಾಗಿ ಬೆರೆತಿರುತ್ತದೆ. ಇದನ್ನು ಪರಿಣತರಾದವರು ತಟ್ಟನೆ ಪತ್ತೆ ಹಚ್ಚಬಲ್ಲರು. ಭಕ್ತರು ರಸ್ತೆಯಲ್ಲಿ ಹೋಗು ಬರುವವರನ್ನೆಲ್ಲ ಊಟಕ್ಕೆ ಕರೆಯುವುದುಂಟು. ಈ ಪಾನಸೇವಿತ, ಬಾಡುಸುಶೋಭಿತ ಇವರು, ಮುಸ್ಸಂಜೆಯ ತನಕ ಮರದ ನೆರಳಲ್ಲಿ ಸಮಾಧಿ ಅವಸ್ಥೆಗೆ ಸಲ್ಲುವುದು ಇನ್ನೊಂದು ಅಪೂರ್ವ ದೃಶ್ಯ.

ಗಾಳೆಮ್ಮನಗುಡಿ ಬಿಟ್ಟು ಕೊಂಚ ಮುಂದೆ ಹೋದರೆ ಕಾಮಲಾಪುರ ಕೆರೆ ಸಿಗುತ್ತದೆ. ಅದರ ಏರಿ ಕೆಳಗೆ ದೂರದಲ್ಲಿ ನೀಲಾಗಸ ಭಿತ್ತಿಯಲ್ಲಿ ಮೂಡಿದ ಬಂಡೆಬೆಟ್ಟಗಳ ಸಾಲು, ಅದರ ಬುಡದಲ್ಲಿ ಅಗೋಚರವಾಗಿ ಹರಿವ ತುಂಗಭದ್ರಾ ಹೊಳೆ, ಹಂಪಿಯ ಗುಡಿಗೋಪುರ, ವಿಜಯನಗರದ ಕೋಟೆ–ಬುರುಜು, ನಡುವೆ ಪಸರಿಸಿರುವ ಹಚ್ಚನೆಯ ಬಾಳೆ ಕಬ್ಬು ಬತ್ತದ ಗದ್ದೆಗಳು. ಏರಿಯ ಹಿಂದೆ ಮೈಸ್ಸಿನಿಂದ ಕೆಂಬಣ್ಣ ಪಡೆದು ಕುಣಿವ ನೀರು. ಅದರಲ್ಲಿ ತೇಲುವ ಬೆಸ್ತರ ಪುಟ್ಟಿಗಳು. ಅದರ ಹಿಂದೆ ಮತ್ತೆ ಹಸುರು ಕಕ್ಕುವ ಪೈರುಪಚ್ಚೆ. ಇದು ಈ ಸೀಮೆಯಲ್ಲೇ ಮನೋಹರ ದೃಶ್ಯಾವಳಿ; ಇದನ್ನು ನೋಡುತ್ತ ಮೈಮರೆತ ಅನೇಕರು ತಮ್ಮ ವಾಹನಗಳನ್ನು ಏರಿಯ ಕೆಳಗೂ ಕೆರೆಯ ಒಳಗೂ ಇಳಿಸಿರುವ ನಿದರ್ಶನಗಳುಂಟು. ಸೌಂದರ್ಯ ಇರುವ ಕಡೆ ಆಘಾತಗಳು ಸಹಜ ತಾನೇ? ಏರಿ ಮುಗಿದು ಕೋಡಿ ಬರುವಾಗ ಅಲ್ಲಿ ಘಮ್ಮೆಂದು ಮತ್ಸ್ಯಗಂಧ ಮೂಗಿಗೆ ತಾಗುತ್ತದೆ. ತಿನ್ನುಣ್ಣುವವರು ಬಸ್ಸಿನಲ್ಲಿದ್ದೇ ಅದರ ಮೂಗಾಳಿ ಹಿಡಿದು ಹಿಗ್ಗುವರು. ಕರಾವಳಿಯಲ್ಲಿರುವ ಕಡಲಮೀನಿನ ವಾಸನೆಗೆ ಹೋಲಿಸಿದರೆ, ಕೆರೆಮೀನಿನ ಸುಗಂಧದಲ್ಲಿ ಹಸಿಯಾದ ಹಿತವಿದೆ ಎಂದು ನನ್ನ ಅಭಿಮತ. ಮತ್ಸ್ಯಪ್ರೇಮಿಗಳಂತೂ ಬೆಳಗಿನ ಜಾವವೇ ಕೆರೆಯ ಬಳಿ ಬಂದು, ಅಲ್ಲೇ ವಾಕಿಂಗು ಮುಗಿಸಿ, ಬ್ಯಾಗು, ದುಡ್ಡು ಹಿಡಿದು ಮೀನು ಮೇಲೆ ಬರುವುದನ್ನೇ ಕಾಯುತ್ತಿರುವರು. ಮತ್ಸ್ಯಗಂಧಿಯರು ಪುಟ್ಟಿಯೊಳಗಿಂದ ಮೀನನ್ನು ಸುರಿದ ಕೂಡಲೇ, ತಮಗೆ ಬೇಕಾದ್ದನ್ನು ತುಡುಕಿ ಹಿಡಿದು ತಕ್ಕಡಿಗೆ ಹಾಕಲು ತವಕಿಸುವರು. ಅವರ ತವಕಕ್ಕೆ ಒಳಗೊಳಗೇ ಸಂತೋಷಪಡುತ್ತ 'ತಡಿಯಣ್ಣ ಯಾಕ್ಹಂಗ್ ಅವಸರ ಮಾಡ್ತೀಯ? ಎಲ್ ಓಡೋಗ್ತವ ಮೀನು?' ಎಂದು ಸಣ್ಣಗೆ ಗದರಿಸುತ್ತ ಕಂತ್ರಾಟುದಾರನು